ದಿನಾಂಕ 25-04-2025 ರಂದು ಸಾಕ್ಷಿಯನ್ನು ಮರಳಿ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀಸವಾಲುಃ 2 ನೇ ಆರೋಪಿ ಪರವಾಗಿ ಶ್ರೀ ಎಸ್.ಎ. ವಕೀಲರಿಂದ**

29) ನನಗೆ ಈಗ ತೋರಿಸಿದ ತಾರೀಕು 16-03-2019 ರ 2.00 ಗಂಟೆ 38 ನಿಮಿಷದ ಸಮಯದಲ್ಲಿನ ವೀಡಿಯೋದಲ್ಲಿ ಕೈತೊಳೆಯುವ ಪ್ರಕ್ರಿಯೆ ಇದೆ. ಸದರಿ ವೀಡಿಯೋದಲ್ಲಿ ಆಗ 1 ನೇ ಆರೋಪಿ ನೀಲಿ ಶರ್ಟಿನಲ್ಲಿ ಮತ್ತು 2 ನೇ ಅರೋಪಿ ಹಳದಿ ಶರ್ಟಿನಲ್ಲಿ ಇರುವುದು ಕಂಡುಬರುತ್ತದೆ. ಉಳಿದವರು ಪೊಲೀಸ್ ಸಿಬ್ಬಂದಿಗಳು ಮತ್ತು ಪಂಚರು. ಸದರಿ ವಿಡಿಯೋದಲ್ಲಿ 2.00 ಗಂಟೆ 42 ನಿಮಿಷ 3 ಸೆಕೆಂಡ್‌ಗಳ ಅವಧಿಯವರೆಗಿನ ವೀಡಿಯೋದಲ್ಲಿ 2 ನೇ ಆರೋಪಿಯ ಕೈಗಳನ್ನು ತೊಳೆಸಿಲ್ಲ ಎಂದರೆ ನಿಜ. ಈ ಸಮಯದಲ್ಲಿ 2 ನೇ ಆರೋಪಿತನನ್ನು ಆ ಕೋಣೆಯಿಂದ ಹೊರಗೆ ಕರೆದುಕೊಂಡು ಹೋಗುತ್ತಿದ್ದಾರೆ ಎಂದರೆ ನಿಜ. 2.00 ಗಂಟೆ 43 ನಿಮಿಷ 30 ಸೆಕೆಂಡ್‌ನ ಸಮಯದಲ್ಲಿ 2 ನೇ ಅರೋಪಿಯ ಕೈಗಳನ್ನು ಅಗಲಿಸಿ, ಮೇಲಕ್ಕೆ ಹಿಡಿದುಕೊಂಡು ಕೋಣೆಯ ಒಳಗೆ ಕರೆತಂದಿದ್ದಾರೆ. ಅದೇ ವೀಡಿಯೋದ 2.00 ಗಂಟೆ 43 ನಿಮಿಷ 43 ಸೆಕೆಂಡ್‌ಗಳ ವಿಡಿಯೋದಲ್ಲಿ 2 ನೆ ಆರೋಪಿಯ ಕೈಗಳನ್ನು ತೊಳೆಯುತ್ತಿದ್ದಾರೆ ಎಂದರೆ ನಿಜ.

30) ನನಗೆ ಈಗ ತೋರಿಸಿದ 3.00 ಗಂಟೆ 30 ನಿಮಿಷ 38 ಸೆಕೆಂಡ್ ಗಳ ಸಮಯದ ವೀಡಿಯೋದಲ್ಲಿ 2 ನೇ ಅರೋಪಿತನನ್ನು ನಮ್ಮ ಕೋಣೆಯಿಂದ ಕೆಳಗಿನ ಅಂತಸ್ತಿಗೆ ಕರೆದುಕೊಂಡು ಹೋಗಿದ್ದರು ಎಂದರೆ ನಿಜ. 3 ಗಂಟೆ 38 ನಿಮಿಷ 43 ಸೆಕೆಂಡ್ ಗಳ ಸಮಯದಲ್ಲಿನ ಕ್ಲಿಪಿಂಗ್ ನಲ್ಲಿ ಲೋಕಾಯುಕ್ತ ಇನ್ಸಪೆಕ್ಟರ್ ಸತೀಶ್ ಇವರ ಕೈಯಲ್ಲಿ ಒಂದು ನೀಲಿ ಬಣ್ಣದ ಬ್ಯಾಗ್ ಇದೆ ಎಂದರೆ, ಅವರ ಮುಖ ಸರಿಯಾಗಿ ಕಾಣುತ್ತಿಲ್ಲ. ಟ್ರಾನ್ಸಪೋರ್ಟ ಡಿಪಾರ್ಟಮೆಂಟ್ ಕಚೇರಿ 1 ನೇ ಆರೋಪಿಯ ಕೋಣೆಯ ಅಂತಸ್ತಿನಲ್ಲಿಯೇ ಎದುರಿನಲ್ಲಿ ಇದೆ ಎಂದರೆ ನಿಜ. ಸದರಿ ನೀಲಿ ಬ್ಯಾಗ್ ನಲ್ಲಿ ಏನು ಇತ್ತು ಎಂದು ನನಗೆ ಗೊತ್ತಿಲ್ಲ.

34) ದಿನಾಂಕ 15-03-2019 ರಂದು ನಾನು ಆರೋಪಿತನೊಂದಿಗೆ ಸಂಭಾಷಣೆ ಮಾಡಿಲ್ಲ ಎಂದರೆ ಸರಿಯಲ್ಲ. ಆ ಸಮಯ ಸಂಭಾಷಣೆಯನ್ನು ನಾನು ಮುದ್ರಿಸಿಕೊಂಡು ಪೊಲೀಸರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆಡಿಯೋ, ವೀಡಿಯೋ ಎಲ್ಲಾ ಕೊಟ್ಟಿದ್ದೇನೆ. 2 ನೇ ಅರೋಪಿಯಿಂದ ಪೊಲೀಸರು ಯಾವುದೇ ಹಣವನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ತನಿಖೆಗೆ ಅನುಕೂಲವಾಗಲೀ ಎಂದು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

-ಮರುವಿಚಾರಣೆ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್.ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು
ಉಡುಪಿ